

ಅನೂಹ್ಯ ರೋಚಕತೆ. ಒಂದರ್ಥದಲ್ಲಿ ದೇವಲೋಕದ ಹಿತಕ್ಕಾಗಿ ದುಡಿಯುವ 'ಕರ್ತವ್ಯ'ದ ಭಾಗವೂ ಹೌದು. ನಾವು ಬೆಚ್ಚನೆಯ ಸುಖವನ್ನು ಅನುಭವಿಸುವ ಮಾರ್ಗವೂ ಹೌದು. ಜೀವನ ಪಯಣದಲ್ಲಿ ಅತ್ಯಂತ ಖುಷಿಯ ಕ್ಷಣಗಳೂ, ಉಲ್ಲಾಸ–ಲಾಸ್ಯಗಳ ಸಂಭ್ರಮವೂ ಇದೆ. ಅತೃಪ್ತಿಯ, ಏನೋ ಕೊರತೆಯ ವಿಷಾದವೂ, ವಿವಶತೆಯೂ ಇದೆ.

ನನ್ನ ತಂದೆ ಕಶ್ಯಪ ಮುನಿಗೆ ನಾನೆಂದರೆ ಬಹಳ ಪ್ರೀತಿ. ಅಮ್ಮ ಪ್ರಾಧೆಯೂ ಸುಂದರಿಯೇ. ಜಂಬ ಕೊಂಚ ಜಾಸ್ತಿ. ಯಾಕೆಂದರೆ ಆಕೆ ದಕ್ಷನ ಕುವರಿಯಲ್ಲವೆ? ದಕ್ಷತೆಯಿಂದ ರಾಜ್ಯಭಾರ ಮಾಡುವ ಅಜ್ಜ ದಕ್ಷ, ದೇವಿ ದಾಕ್ಷಾಯಣಿಯ ಬಲಿದಾನ ಆಗಿ ಶಿವನಿಂದ ಶಿಕ್ಷಿತನಾಗುವವರೆಗೂ ಅಹಂಕಾರಿಯೇ ಆಗಿದ್ದನಲ್ಲ! ಹೌದು, 'ವಿಶ್ವಸುಂದರಿಯಾದ ಮಗಳು ಬೇಕು' ಎಂಬ ಅಮ್ಮ ಪ್ರಾಧೆಯ ಕೋರಿಕೆಯಂತೆ ಪಿತ ಕಶ್ಯಪ ವಿಶೇಷ ತಪಶ್ಶಕ್ತಿಯಿಂದ ನನ್ನನ್ನು ಪಡೆದನಂತೆ. ಯಾರದೇ ಹುಟ್ಟಿನ ಬಗ್ಗೆ ಮತ್ತು ತಂದೆ ಯಾರು ಎಂಬುದನ್ನು ಹೇಳುವವರು ಯಾರು? ಅಮ್ಮನೇ ಅಲ್ಲವೆ? ತುಂಬುರ ಗಂಧರ್ವನ ಮಡದಿಯೂ, ಕುಬೇರನ ಕಿರಿಯ ಮಗ ನಳಕೂಬರನ ಪ್ರಿಯತಮೆಯೂ ಆದ, ನನ್ನ ಸೋದರಿ ರಂಭೆಯೂ ಸುಂದರಿಯೇ. ತಿಲೋತ್ತಮೆ ಮೊದಲಾದ ಅಪ್ಸರೆಯರಂತೆ ಸುಂದರಿಯರಾದ ಕುವರಿಯರೇ ತನಗೂ ಬೇಕೆಂದು ಅಮ್ಮ ಬಯಸಿದ್ದು ಸಹಜವೇ. ಆಕೆ ಏಕಾಂತದಲ್ಲಿ ಇಂಗಿತ ವ್ಯಕ್ತಪಡಿಸಿ ತಂದೆ ಕಶ್ಯಪರಲ್ಲಿ ಪ್ರಾರ್ಥಿಸಿದ್ದಳಂತೆ. ಅದು ಸುಲಲಿತ ವಿಮಲ ಫಲ ನೀಡುವಲ್ಲಿ ಸಫಲವಾಯಿತು. ನಾವು ಅಭಿಜಾತ ಸುಂದರಿಯರು; ನಿತ್ಯಕನ್ಯೆಯರು. ಚಿರಯೌವನೆಯರು. ಘ್ರಾತ ಪುಷ್ಪಗಳಾದರೂ ಅನಾಘ್ರಾತ ಪುಷ್ಪಗಳೇ ಆಗಿರುವ ನಿತ್ಯ ನೂತನೆಯರು.

ನಾನು ವಿಹಾರ ಪ್ರಿಯೆ. ಗಿರಿವನಗಳಲ್ಲಿ, ಹಿಮಾಲಯ, ವಿಂಧ್ಯಾಚಲ ಮೊದಲಾದ ಪ್ರಕೃತಿ ರಮ್ಯ ಪರ್ವತಗಳ ಸಾನು ಪ್ರದೇಶಗಳಲ್ಲಿ, ಕುಬೇರನ ಅಲಕಾ ಉದ್ಯಾನದಲ್ಲಿ, ಇಂದ್ರನ ನಂದನವನದಲ್ಲಿ – ನನಗೆ ಇಷ್ಟವಾದ ತಾಣಗಳಲ್ಲಿ ವಿಹರಿಸುತ್ತಿರುತ್ತೇನೆ. ಒಮ್ಮೆ ನನ್ನ ಸೌಂದರ್ಯವನ್ನು ಕಂಡು ಮೋಹಿತನಾದ ಭಾರದ್ವಾಜ ಮುನಿಯ ವೀರ್ಯ ಸ್ಖಲಿತವಾಗಿ ಹೋಯಿತು. ಅದನ್ನು ಆತ 'ದ್ರೋಣ'ದಲ್ಲಿ (ದೊನ್ನೆಯಲ್ಲಿ) ಇರಿಸಿ ಸಂರಕ್ಷಿಸಿದ. ಈ ರೇತಸ್ಸಿನಿಂದ ಜನಿಸಿದವನೇ ದ್ರೋಣಾಚಾರ್ಯ ಎಂದು ಪ್ರಸಿದ್ಧನಾದನಲ್ಲ!

ಅದೊಂದು ದಿನ ನಾನು ಶುಕರೂಪದಲ್ಲಿ ಸಂಚರಿಸುತ್ತಿದ್ದೆ. ವ್ಯಾಸ ಮಹರ್ಷಿಗಳು ನನ್ನನ್ನು ಕಂಡು ಮೋಹಿಸಿದರು. ಪರಾಶರ ಮಹರ್ಷಿಗಳು ಮತ್ಸ್ಯಗಂಧಿಯನ್ನು ಯೋಜನಗಂಧಿಯನ್ನಾಗಿಸಿ, ಅವಳಲ್ಲಿ ವ್ಯಾಸರನ್ನು ಪಡೆದಿರುವರಷ್ಟೆ. 'ಜ್ಞಾನಮಯ ಪ್ರದೀಪರು ಅವರು. ಅವರಾಗಿ ನನ್ನಲ್ಲಿ ಪ್ರಣಯಭಿಕ್ಷೆ ಬೇಡಿದರು. ಮಹಾಮೇಧಾವಿ, ಅಧ್ಯಾತ್ಮ ಮೇರುಗಿರಿ ತಲುಪುವ ವರಕುಮಾರನನ್ನು ಪಡೆಯಲು ಬಯಸಿದರು. ನಾನು ಒಪ್ಪಿದೆ. ಕೆಲವು ಕಾಲ ಅವರೊಂದಿಗೆ ವಾಸ ಮಾಡಿದೆ. ನಮ್ಮ ಮಿಲನದ ಫಲವಾಗಿ ಹುಟ್ಟಿದವನೇ 'ಶುಕ'. ಹಾಂ, ಶ್ರೀಮನ್ಮಹಾಭಾಗವತ ಪುರಾಣವನ್ನು ಜನಮೇಜಯನಿಗೆ ಶ್ರುತಪಡಿಸಿದ ಶುಕ ಮಹರ್ಷಿ. ವ್ಯಾಸರನ್ನು ಬೀಳ್ಕೊಂಡ ಮೇಲೆ ತ್ರಿವೇಣಿ ಸಂಗಮದಲ್ಲಿ ನಾನು ಮೀಯುತ್ತಿರುವಾಗ ನನ್ನ ಅನುಪಮ